


‘ಬಂದೇ... ಒಂದು ನಿಮಿಷ’ ಭಾಸ್ಕರರಾಯ ಎನ್ನುವ ವ್ಯಕ್ತಿ ತಮ್ಮ ತಳ್ಳು ಕುರ್ಚಿಯನ್ನು ನೂಕಿಕೊಳ್ಳುತ್ತಾ ಆ ಮಂಚದ ಬಳಿ ಹೋದರು.

ಮಂಚದ ಮೇಲೆ ಮಲಗಿದ್ದ ವ್ಯಕ್ತಿ ಬಹುಶಃ ಕುಡಿಯಲು ನೀರು ಕೇಳಿರಬೇಕು. ಬಳಿಯಲ್ಲಿಯೇ ಇದ್ದ ಸ್ಟೀಲ್ ಚಂಬೊಂದರಿಂದ ಲೋಟಾಕ್ಕೆ ನೀರು ಎರೆದು ಕೈಯ್ಯಲ್ಲಿ ಹಿಡಿದು ಮಂಗಲಾಳತ್ತ ತಿರುಗಿ ‘ಬಾ ತಂಗೀ... ತುಸು ಈಕೆಯನ್ನು ಮೇಲೆತ್ತು. ನೀರು ಬೇಕಂತೆ... ಕುಡಿಸುತ್ತೇನೆ’ ಎಂದರು.

ಮಂಗಲಾ ಎದ್ದು ಅತ್ತ ಹೋದಳು.

ಮಲಗಿದ್ದ ವ್ಯಕ್ತಿಯ ಬೆನ್ನು, ಭುಜ ಹಿಡಿದು ಮೆಲ್ಲನೆ ಎಬ್ಬಿಸಿ ಕೂರಿಸಿದಳು.

ಭಾಸ್ಕರರಾಯರು ತಮ್ಮ ಕೈಯ್ಯಲ್ಲಿಯ ಲೋಟದಲ್ಲಿದ್ದ ನೀರನ್ನು ಆ ಹೆಂಗಸಿಗೆ ಕುಡಿಸಿದರು. ‘ಸಾಕಾ... ಇನ್ನೂ ಸ್ವಲ್ಪ ಬೇಕಾ?’ ಕೇಳಿದರು. ‘ಬೇಡ’ ಎನ್ನುವಂತೆ ತಲೆಯಾಡಿಸಿದಳು ಆ ಹೆಂಗಸು.

‘ನಿಧಾನವಾಗಿ ಹಾಗೆಯೇ ಮಲಗಿಸು ತಂಗೀ’ ಎಂದು ಮಂಗಲಾಳಿಗೆ ಹೇಳಿದರು ಭಾಸ್ಕರರಾಯರು.

ಮಂಗಲಾ ಆ ಹೆಂಗಸನ್ನು ಮೊದಲಿನ ಹಾಗೆಯೇ ಮಲಗಿಸಿ, ಮೈಮೇಲೆ ಚಾದರ ಸರಿಸಿದಳು.

ಮಂಗಲಾ ಮರಳಿ